ಆಗಲಿ ಎಣ್ಣೆರೊಟ್ಟಿ, ಬರೀಅಕ್ಕಿ ದೋಸೆ, ಮೆಂತ್ಯದ ರೊಟ್ಟಿ, ಹಲಸಿನ ಹಣ್ಣಿನ ಮುಳುಕ, ಅವ್ವೌಗ, ಅತ್ರಸ ತಿನ್ನಬೇಕೆನಿಸಿದ ತಿಂಡಿ ತಿನಿಸು ಮಾಡಿಸಿಕೊಂಡು ತಿನ್ನುವುದು ಶತಸ್ಸಿದ್ಧ. ಅದಕ್ಕಾಗಿ ಪತಿಯೇ ದೇವರು ಎಂದುಕೊಂಡು, ತುಟಿಪಿಟಕ್ ಎನ್ನದೇ ಸದಾಸಾಥ್ ನೀಡುವ ಮಡದಿ ಕಾವೇರಿ. ಪಾತಳಂಕಣದ ಭರ್ಜರಿ ಚೌಕಿ ಮನೆ. ಹಿತ್ತಲಲ್ಲಿ ಚಪ್ಪರತೊಂಡೆ, ಬಸಳೆ. ಹರವೆ, ಹಾಗಲ, ಹೀರೇ, ಅಲಸಂಡೆ ಒಂದಲ್ಲ ಒಂದು ತರಕಾರಿ ವರ್ಷವಿಡೀ ಲಭ್ಯ.



ತಿಂಗಳಿಗೆ ಎರಡುಮೂರು ಬಾರಿ ಹರಳೆಣ್ಣೆ ಹಚ್ಚಿಕೊಂಡು, ತಾಮ್ರದ ಕಡಾಯಿಯಲ್ಲಿ ಅಭ್ಯಂಜನ. ಮೈತಲೆ ಗಸಗಸ ತಿಕ್ಕಲು ಸೀಗೆಪುಡಿ, ಅಂಟುವಾಳ, ಬೆಳ್ಳಂಟೆ,ಮತ್ತಿಸೊಪ್ಪಿನ ಗುಳ. ಅಭ್ಯಂಜನ ಮುಗಿಯುತ್ತಿದ್ದಂತೆ, ಬಚ್ಚಲೊಲೆಬೆಂಕಿ ಮುಂದೆ ಕಂಬಳಿ ಹೊದ್ದು ಮೈಬೆವರಿಳಿಸಿಕೊಳ್ಳಬೇಕು. ಆನಂತರ ಕಂಚಿನ ಉದ್ದ ಲೋಟದಲ್ಲಿ ರಾಮರಸ ಕುಡಿದು ಸಿದ್ಧವಾಗಿದ್ದ ಹಾಸಿಗೆಯಲ್ಲಿ ಎರಡೆರಡು ಜಾಡಿ ಹೊದ್ದು, ದೇಹದ ಉಷ್ಣ ತಂಪಾಗಿಸಿಕೊಂಡು ಗೊರಕೆ ಹೊಡೆಯಬೇಕು.

ಶೇಷಪ್ಪನ ವಿಷಯ ಬಂದಾಗ ಊರವರು ಸಸಿಹಕ್ಲು ಪ್ರಸ್ತಾಪಿಸದೇ ಇರುವುದಿಲ್ಲ. ಹಟವಾದಿ ಮಾತ್ರವಲ್ಲ; ಅವ ಛಲವಾದಿಯೂ ಹೌದು ಎನ್ನುವುದಕ್ಕೆ ಸಸಿಹಕ್ಲು ಅಡಿಕೆತೋಟವೇ ಪ್ರತ್ಯಕ್ಷ ಸಾಕ್ಷಿ!

ತುಂಬಿ ತುಳುಕುವ ಯೌವನದಲ್ಲಿ ಶೇಷಪ್ಪನ ಕಣ್ಣಿಗೆಕಟ್ಟುತ್ತಿದ್ದದ್ದು ಸಸಿಹಕ್ಲು ಸರಕಲು. ಬೀರಹಕ್ಲುಕಾನು ಹತ್ತಿಳಿದು ಆಕಡೆ ಈಕಡೆ ಹೋಗಿಬರುವಾಗಲೆಲ್ಲಾ ಪ್ರತಿ ಸಾರ್ತಿಯೂ ಭಾವಪರವಶನಾಗಿ ನೋಡುತಿದ್ದ. ನೋಡುವುದೇನು? ಎರಡು ಬದಿ ಧರೆ, ಮಧ್ಯೆ ಸರಕಲು. ಮೇಲ್ಭಾಗದಲ್ಲಿ ಕೆರೆ. ದಂಡೆಯಾಚೆ ಬ್ಯಾಣ. ಧರೆಯ ಎರಡು ಬದಿ ಹೈಗಾ ಗಿಡಪೊದೆಗಳ ಹಾಡಿ. ವರ್ಷಾವಧಿ ಸೊಪ್ಪುಸದೆ, ದರಗಿಗೆ ಬರವಿಲ್ಲ! ಸರಕಲ್ಲಲ್ಲಿ ಸದಾ ಹರಿಯುವ ಮೇಲ್ಕೆರೆ ನೀರು. ತಳತಂಪು. ಅಷ್ಟೇ ಅಲ್ಲ; ಪೂರ್ವದ ಎಳೆ ಬಿಸಿಲು, ಪಶ್ಚಿಮದ ಇಳಿಬಿಸಿಲು. ಬಾಗಾಯ್ತಿಗೆ ಹೇಳಿಮಾಡಿಸಿದ ಜಾಗ!! ದಿನದಿಂದ ದಿನಕ್ಕೆ ಬಯಕೆ ಬಲಿತು ಚಿಗುರೊಡೆಯಿತು. ಕುಲದೇವರು ಶಂಕರನಾರಾಯಣನಿಗೆ ಜೋಡುಫಲವಿಟ್ಟು, ಹರಕೆ ಹೊತ್ತು, ಒಂದು ಮುಂಜಾನೆ ಶಿರಸ್ತೇದಾರ ರಾಮಪ್ಪನವರನ್ನು ಆಗುಂಬೆಯಲ್ಲಿ ಕಂಡು ಬಿನ್ನವಿಸಿಕೊಂಡ. 'ನೋಡೋಣ, ದರಖಾಸ್ತಿಗೆ ಅರ್ಜಿಕೊಡಿ, ಜಮಾ ಬಂದಿಯಲ್ಲಿಡುತ್ತೇನೆ. ಸಾಹೇಬರು ಅನುಗ್ರಹಿಸಿದರೆ ನಿಮ್ಮ ಅದೃಷ್ಟ' ಎಂದರು ಶಿರಸ್ತೇದಾರು. ನಾಲ್ಕು ಎಕರೆ ಭಾಗಾಯ್ತು, ಎಂಟು ಎಕರೆ ಖುಷ್ಕಿ, ವರ್ಷದೊಳಗೆ ಮಂಜೂರಾಯ್ತು.'ಪೈಸೆ ಖರ್ಚಿಲ್ಲದೇ ದಕ್ಕಿದ ಜಮೀನು. ಕುಲದೇವರು ಶಂಕರನಾರಾಯಣನ ಕೃಪೆ! ಶಿರಸ್ತೇದಾರ ರಾಮಪ್ಪ, ನನ್ನ ಪಾಲಿನ ಪ್ರತ್ಯಕ್ಷ ದೇವರು!' ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದ ಶೇಷಪ್ಪ. ಶೇಷಪ್ಪ ಎಂಥ ಕೃಷಿಕಾರನೆಂದರೆ ಮನೆಕಡೆ ಧ್ಯಾಸವೇ ಇರದಿದ್ದವ. ಊಟತಿಂಡಿ ವಿಷಯದಲ್ಲೂ ಅಷ್ಟೇ. ಬೆಳಗ್ಗೆ ಮಾಡಿದ ತಿಂಡಿಯೋ, ಗಂಜಿಯೋ ಪಾತ್ರೆಯಲ್ಲಿ ಹಾಕಿಕೊಂಡು ಬಂದು ಮಧ್ಯಾಹ್ನ ಅದನ್ನೇ ತಿಂದು, ಬೊಗಸೆಯಲ್ಲಿ ಸರಕಲ ನೀರ ಕುಡಿದು, ತೋಟಕೆರೆ ಪಕ್ಕದ ಹಾಡಿ ದರಗಿನ ಮೇಲೆ ಟವಲ್ ಹಾಸಿ ಕೈತೋಳನ್ನೇ ದಿಂಬಾಗಿಸಿಕೊಂಡು ಗೊರಕೆ ಹೊಡೆಯುತ್ತಿದ್ದ! ವರಷಕ್ಕೊಮ್ಮೆ ಊರನವರನ್ನೆಲ್ಲಾ